RE : BREACH OF MARALAVADI TANK IN KANAKAPURA TALUK

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ).—ಮಾನ್ಯ ಅಧ್ಯಕ್ಷರೇ, ಕನಕಪುರ ತಾಲ್ಲೂಕಿನಲ್ಲಿ ಮರಳವಾಡಿಯಲ್ಲಿ ಟ್ಯಾಂಕ್ ಇದ್ದಕ್ಕಿದ್ದಹಾಗೆ ಹೊಡೆದು ಹೋಗಿ ಅನೇಕ ಜನರು ಮೃತಪಟ್ಟಿದ್ದಾರೆ. ಅದರಲ್ಲಿ ಒಬ್ಬ ತಾಯಿ, ಒಬ್ಬ ಮಗಳು ಪ್ರವಾಹದಲ್ಲಿ ಕೊಚ್ಚಿಹೋಗಿದ್ದಾರೆ. ಜೊತೆಗೆ ಬೇಕಾದಷ್ಟು ಆಸ್ತಿಪಾಸ್ತಿಗಳು ಕೊಚ್ಚಿಹೋಗಿ ಲಕ್ಷಾಂತರ ರೂಪಾಯಿ ಹಾಳಾಗಿ ರೈತರಿಗೆ ಬಹಳ ತೊಂದರೆಯಾಗಿ ನಿರ್ಗತಿಕರಾಗಿ ನಿಂತಿದ್ದಾರೆ. ಪತ್ರಿಕಾ ವರದಿ ಪ್ರಕಾರ ಮಾನ್ಯ ಸಚಿವರು ಸ್ಥಳಕ್ಕೆ ಭೇಟಿ ಕೊಟ್ಟಿದ್ದರು ಎಂದು ಕೇಳಿದ್ದೇವೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಸಚಿವರು ಸರ್ಕಾರದ ಪರವಾಗಿ ತೊಂದರೆಗೀಡಾದ ರೈತರಿಗೆ ಏನು ಪರಿಹಾರ ಒದಗಿಸಿದ್ದಾರೆ ಎಂಬುದಕ್ಕೆ ಒಂದು ಸ್ಟೇಟ್‌ಮೆಂಟ್ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಅಲ್ಲಿ ಬಹಳ ಭೀಕರವಾದ ಪರಿಸ್ಥಿತಿಯುಂಟಾಗಿದೆ ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನಾದರೂ ಹೇಳುವುದಿದ್ದರೆ ದಯಮಾಡಿ ಹೇಳಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಹೇಳಿದಹಾಗೆ ಅಲ್ಲಿ ಇನ್ನು ೪-೬ ಕೆರೆಗಳು ಏಕಕಾಲದಲ್ಲಿ ಒಡೆದುಹೋಗಿ ಅಲ್ಲಿನ ಜನರಿಗೆ ತುಂಬಾ ತೊಂದರೆಯುಂಟಾಗಿದೆ. ನಾನು ಮತ್ತು ಚೀಫ್ ಇಂಜಿನಿಯರ್, ಜಿಲ್ಲಾಧಿಕಾರಿಗಳು ಮತ್ತು ಪೋಲೀಸರು ಎಲ್ಲರೂ ಅಲ್ಲಿಗೆ ಖುದ್ದು ಹೋಗಿ ನೋಡಿ ಬಂದಿದ್ದೇವೆ. ಈಗ ಒಂದು ಗಂಟೆಯೊಳಗೆ ಅಲ್ಲಿನ ಪರಿಸ್ಥಿತಿಯ ಬಗ್ಗೆ ವರದಿ ಬರಬೇಕಾಗಿತ್ತು. ಅಲ್ಲಿ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೊ ಅದರ ಬಗ್ಗೆ ಸೂಚನೆ ಕೊಡುವುದಕ್ಕೆ ಅಲ್ಲಿ ಆಗಿರ ತಕ್ಕ ಘಟನೆ ಬಗ್ಗೆ ಕರಾರುವಾಕ್ಕಾಗಿ ವಿಷದವಾಗಿ ಎಲ್ಲಾ ಅಂಶಗಳನ್ನು ಒದಗಿಸ ಬೇಕೆಂದು ಆಜ್ಞೆ ಮಾಡಿದ್ದೇನೆ. ಯಾವ ಯಾವ ಕೆರೆಯಲ್ಲಿ ಎಷ್ಟೆಷ್ಟು ಜಮೀನುಗಳು ಮತ್ತು ಆಸ್ತಿಪಾಸ್ತಿಗಳು ಮತ್ತು ಜನರಿಗೆ ಹಾನಿ ಉಂಟಾಗಿದೆ ಎಂಬುದಕ್ಕೆ ಸರಿಯಾದ ವಿವರಗಳು ನಾವು ಹೋದ ಕಾಲಕ್ಕೆ ಸಾಯಂಕಾಲವಾದ್ದರಿಂದ ಅದನ್ನೆಲ್ಲಾ ಪತ್ತೆ ಹಚ್ಚುವುದಕ್ಕೆ ಸಾಧ್ಯವಾಗಲಿಲ್ಲವಾದ್ದರಿಂದ ಚೀಫ್ ಇಂಜಿನಿಯರ್ ಮತ್ತು ಸೂಪರಿಂಟೆಂಡಿಂಗ್ ಇಂಜಿನೀಯರ್ ಇಬ್ಬರು ಸಿಬ್ಬಂದಿಯೊಡನೆ ಅಲ್ಲೇ ಇದ್ದಾರೆ. ಅವರಿಗೆ ನಾನು ತಿಳಿಸಿದ್ದೇನೆ ಒಂದು ಕಾಂಪ್ರಹೆನ್ಸಿವ್ ರೀಪೋರ್ಟು ಕಳುಹಿಸಿಕೊಡ ಬೇಕು ಎಂದು. ಆ ವಿವರಗಳನ್ನೆಲ್ಲಾ ಕಲೆಕ್ಟ್ ಮಾಡುವುದಕ್ಕೆ ಸ್ವಲ್ಪಕಾಲ ಆಗುವುದರಿಂದ ಅದರ ಬಗ್ಗೆ ನಾಳೆ ಒಂದು ಸಮಗ್ರವಾದ ವರದಿಯನ್ನು ಇಲ್ಲಿ ಮಂಡಿಸುತ್ತೇನೆ.

ಶ್ರೀ ಜಿ. ಎನ್. ಪಾಟೀಲ್.— ಮಾನ್ಯ ಅಧ್ಯಕ್ಷರೇ, ತಾವು ಈಗ ತಾನೇ

ಹೇಳಿದಿರಿ. ಒಬ್ಬೊಬ್ಬರು ೭–೮ ಕಾಲಿಂಗ್ ಅಟೆನ್‌ಷನ್ ನೋಟೀಸುಗಳನ್ನು ಕಳುಹಿಸುತ್ತಾರೆ. ಅದರಿಂದ ಎಲ್ಲವನ್ನೂ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು. ಆದರೆ ನಾನು ಒಂದೇ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸು ಕೊಟ್ಟಿದ್ದೇನೆ. ಶ್ರೀಮತಿ ಸುಮಿತ್ರಾ ದೇಸಾಯಿಯವರ ಪ್ರಕರಣದ ಬಗ್ಗೆ, ಇಲ್ಲಿಯ ವರೆಗೂ ಅದನ್ನು ತೆಗೆದುಕೊಂಡಿಲ್ಲ, ಅದಕ್ಕೆ ಸರ್ಕಾರದಿಂದ ಯಾವುದೇ ಉತ್ತರ ಸಹಿತ ಬಂದಿಲ್ಲ.

ಅಧ್ಯಕ್ಷರು.— ದಯವಾಡಿ ಎಲ್ಲರೂ ಕುಳಿತುಕೊಳ್ಳಿ.

Re : Burning of Important Court Documents in Mandya

ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗವಂಗಲ).— ಅಧ್ಯಕ್ಷರೇ, ಮೊನ್ನೆ ಒಂದು ಗಮನ ಸೆಳೆಯುವ ಸೂಚನೆಯನ್ನು ತಮ್ಮ ಅವಗಾಹನೆಗಾಗಿ ತಂದಿದ್ದೆ. ಅದು ಏನು ಎಂದರೆ ಮಂಡ್ಯ ಕೋರ್ಟುಗಳಲ್ಲಿ ಬಹಳ ಮುಖ್ಯವಾದ ದಾಖಲೆಗಳನ್ನು ತೆಗೆದು ಕೊಂಡು ಹೋಗಿ ಸುಟ್ಟು ಹಾಕಿರುವುದು. ಇದರ ಬಗ್ಗೆ ಇದುವರೆಗೆ ಸರ್ಕಾರ ಏನೂ ಕ್ರಮ ತೆಗೆದುಕೊಳ್ಳದೆ ಸುಮ್ಮನೆ ಇದೆ. ಇವು ಬಹಳ ಪ್ರಾಮುಖ್ಯವಾದ ದಾಖಲೆಗಳಾಗಿವೆ. ಈ ಕೃತ್ಯವನ್ನು ಮಾಡಿದಂತಹ ದುಷ್ಕರ್ಮಿಗಳು ಯಾರು ಎಂದು ಇಲ್ಲಿಯ ವರೆಗೆ ಪತ್ತೆ ಮಾಡಿಲ್ಲ. ಇದು ಬಹಳ ಗಂಭೀರವಾದ ವಿಚಾರ. ಎಲ್ಲೂ ನಡೆಯದಂಥ ಘಟನೆ ಇದರಲ್ಲಿ ಸಹಸ್ರಾರು, ಲಕ್ಷಾಂತರ ರೂಪಾಯಿ ವ್ಯವಹಾರದ ದಾಖಲೆಗಳು ಸುಟ್ಟು ಹೋಗಿರುವುದರಿಂದ ಇದು ಬಹಳ ಗಹನವಾದ ವಿಚಾರ, ಆದ್ದರಿಂದ ಇದರ ಬಗ್ಗೆ ಸರ್ಕಾರದವರ ಪ್ರತಿಕ್ರಿಯೆ ಏನು ಎಂದು ತಿಳಿಸಲಿ.

ಅಧ್ಯಕ್ಷರು.— ನೀವು ಹೇಳುತ್ತೀರಿ. ನೀವು ಕಳುಹಿಸಿದ್ದನ್ನು ನಾವು ಸರ್ಕಾರಕ್ಕೆ ಕಳುಹಿಸಿರುತ್ತೇವೆ. ನಮಗೆ ಸ್ಟೇಟ್‌ಮೆಂಟ್ ಬರಲಿ ಅದನ್ನು ತೆಗೆದುಕೊಳ್ಳೋಣ.

ಶ್ರೀ ಎಸ್ ಬಂಗಾರಪ್ಪ.— ರೂಲ್ ೪೧೭ರ ಪ್ರಕಾರ ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ.

ಶ್ರೀ ಕೆ. ಎಚ್. ಹನುಮೇಗೌಡ — ನಾನು ೨ ತಿಂಗಳ ಹಿಂದೆ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೆ.

ಶ್ರೀ ಎಸ್. ಬಂಗಾರಪ್ಪ.— ನನ್ನ ನಿಲುವಳಿ ಸೂಚನೆಯಾದರೂ ಇಷ್ಟೇ. ಮೊನ್ನೆ ನಡೆದಂಥ ಚಳುವಳಿಯಲ್ಲಿ ೨–೩ ಹುಡುಗರು ಪತ್ತೆ ಇಲ್ಲ, ನಾಪತ್ತೆ ಆಗಿದ್ದಾರೆ. ಇದರ ಬಗ್ಗೆ ಸರ್ಕಾರದವರು ಏನಾದರೂ ಒಂದು ಕ್ರಮ ತೆಗೆದು ಕೊಂಡಿದ್ದಾರೆಯೇ ?

ಶ್ರೀ ಕೆ. ಎಚ್. ಹನುಮೇಗೌಡ — ನಾನು ಎರಡು ತಿಂಗಳ ಹಿಂದೆ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸನ್ನು ಕೊಟ್ಟಿದ್ದೆ. ಅದು ಕೋ-ಆಪರೇಟಿವ್ ಸೊಸೈಟಿ ಗಳವರು ಸಾಲ ಹಂಚುವಾಗ ೬ ರಿಂದ ೭ ಪರ್ಸೆಂಟ್‌ನವರಿಗೆ ಬಡ್ಡಿಯನ್ನು ಹಾಕುತ್ತಿದ್ದಾರೆ.

ಅಧ್ಯಕ್ಷರು.— ಸಂಬಂಧಪಟ್ಟ ಮಂತ್ರಿಗಳು ಇಲ್ಲ, ಈಗ ಹೇಳಿದರೆ ಹೇಗೆ ?